**ಸಾಕ್ಷಿಯನ್ನು ದಿಃ 28.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ. ಎಂಎಸ್ ವಕೀಲರಿಂದ**

ನನ್ನ ತಂದೆ ಮತ್ತು 1 ಮತ್ತು 7 ನೇ ಪ್ರತಿವಾದಿ ಮುನಿಶಾಮಪ್ಪನ ಮಕ್ಕಳು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿಲ್ಲ ಆದರೆ ದಾಖಲೆಗಳು ಇವೆ. ನಾನು ನನ್ನ ಕುಟುಂಬದ ವಂಶವೃಕ್ಷ ಮಾಡಿಸಿದ್ದೆ ಎಂದರೆ ಸರಿ. ನನ್ನ ತಂದೆ ಮತ್ತು 7 ನೇ ಪ್ರತಿವಾದಿ ವೆಂಕಟರಾಮಪ್ಪನ ಮಕ್ಕಳು ಎಂದರೆ ಸರಿಯಲ್ಲ. ವಿಭಾಗ ಆಗಿದೆ ಎಂದು ತೋರಿಸಲು ದಾಖಲೆಗಳು ಇಲ್ಲ. ದಾವಾ ಆಸ್ತಿಗಳಲ್ಲಿ ಈರಣ್ಣನಿಗೆ ಬಂದಿದೆ ಆದರೆ ಕೃಷ್ಣಪ್ಪ ಮತ್ತು ಮುನಿಯಪ್ಪನಿಗೆ ಬಂದಿರುವುದಿಲ್ಲ. ಭಾಗದ ಪ್ರಕಾರ ಈರಣ್ಣನಿಗೆ ಖಾತೆ ವಗೈರೆಗಳು ಆಗಿದೆ. ಈರಣ್ಣನಿಗೆ ಯಾವಾಗ ಖಾತೆ ಆಯಿತು ನನಗೆ ಗೊತ್ತಿಲ್ಲ. ನಮ್ಮ ಕುಟುಂಬದ ಮೂಲ ಪುರುಷ ಮುನಿಕೆಂಚಪ್ಪ ಎಂದರೆ ಸರಿಯಲ್ಲ. ಸದರಿ ಮುನಿಕೆಂಚಪ್ಪನಿಗೆ ಐಪಣ್ಣ ಮತ್ತು ಕೆಂಚಪ್ಪ ಎನ್ನುವ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸೊಣ್ಣಪ್ಪ ಮತ್ತು ಸೀತಪ್ಪರವರು ತಮಗೆ ಬಂದ ಸ್ವತ್ತನ್ನು ಪಟೇಲ್ ಮುನೇಗೌಡರವರಿಗೆ ದಿಃ 25.09.1954 ರಲ್ಲಿ ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 23.08.1956 ರಲ್ಲಿ ಸದರಿ ಪಟೇಲ್ ಮುನೇಗೌಡ ಸೊಣ್ಣಪ್ಪ ಮತ್ತು ಸೀತಪ್ಪನಿಗೆ ಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಸ್ವಾಧೀನ ಇದ್ದೇನೆ ಎಂದು ತೋರಿಸಲು ನನ್ನ ಹೆಸರಿನಲ್ಲಿ ಖಾತೆ ಇಲ್ಲ ಆದರೆ ನನ್ನ ತಂದೆ ಮತ್ತು ತಾತನ ಹೆಸರಿನಲ್ಲಿ ಖಾತೆ ಇದೆ. ನಿಪಿ-17 ರ ಪ್ರಕಾರ ದಾವಾ ಐಟಂ 2 ರಲ್ಲಿ ಸೊಣ್ಣಪ್ಪ ಮತ್ತು ಸೀತಪ್ಪರವರ ಹೆಸರು ಉಲ್ಲೇಖ ಆಗಿದೆ ಎಂದರೆ ಸರಿಯಲ್ಲ. ಸದರಿ ಐಟಂ 2 ಹೊರತು ಪಡಿಸಿ ಉಳಿದ ಆಸ್ತಿಗಳು ನನ್ನ ತಾತ ಮುನಿಸಾಮಪ್ಪನ ಹೆಸರಿಗೆ ಇವೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನೋಡಿಲ್ಲ. ದಾವಾ ಐಟಂ 2 ಕ್ಕೆ ಸಂಬಂಧಪಟ್ಟಂತೆ 1 ಎಕರೆ 39 ಗುಂಟೆಗೆ ತಕರಾರು ಇದೆ ಎಂದರೆ ಸರಿ. ದಾವಾ ಐಟಂ 2 ಕ್ಕೆ ನನಗೆ ಯಾವುದೇ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯರ ಆಸ್ತಿಯನ್ನ ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಚಂದ್ರಶೇಖರ್ ಅಲಬೂರು)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ